ಜಾಗ ಕೊಡುವುದಿಲ್ಲ ಎಂದು ಬೊಬ್ಬಿಡುತ್ತ, ಆಂಬುಲೆನ್ಸ್‌ಗೆ ಹಿಂದಕ್ಕೆ ಹೋಗುವಂತೆ ದಬಾಯಿಸಿದರು. ಚಾಲನಾ ಸೀಟಿನಿಂದ ಇಳಿದ ರಾಧಿಕಾ ಜನರೊಡನೆ ಮಾತನಾಡಿ ವಿಷಯ ಬಗೆಹರಿಸಲು ಮುಂದಾದರು. ಅದು ಸಾಧ್ಯವಾಗದೇ ಹೋದಾಗ, ಗಾಡಿಯನ್ನು ಅಲ್ಲಿನ ಪೊಲೀಸ್ ಠಾಣೆಗೆ ಕೊಂಡೊಯ್ದರು. ಅಲ್ಲಿಯೂ ವಿಷಯ ಬಗೆಹರಿಯದೇ ಇದ್ದಾಗ, ವಾಪಸ್ ಗಾಡಿ ಚಲಾಯಿಸಿಕೊಂಡು ಬಂದು, ಮಂಗಳೂರಿನಲ್ಲಿ ಮತ್ತೆ ಪೊಲೀಸ್ ಠಾಣೆಗೆ ಆಂಬುಲೆನ್ಸ್ ಕೊಂಡೊಯ್ದು, ಪೊಲೀಸರಿಗೆ ವಿಷಯ ತಿಳಿಸಿದರು. ಪೊಲೀಸರ ಸಮ್ಮುಖದಲ್ಲಿ ತಾವೇ ಮುಂದೆ ನಿಂತು ಶವಸಂಸ್ಕಾರ ಮಾಡಿದರು. ನಿರ್ಗತಿಕ ಮಹಿಳೆಯನ್ನು ತಮ್ಮ ಮನೆಯಲ್ಲಿಯೇ ಇರಿಸಿಕೊಂಡು, ಆಕೆಗೊಂದು ವೃತ್ತಿ ದೊರೆಯುವವರೆಗೆ ಪೋಷಣೆ ಮಾಡಿದರು. ಬದುಕೆಂದರೆ, ಮುಂದಿನ ಕ್ಷಣದಲ್ಲಿ ಪರಿಸ್ಥಿತಿ ಹೇಗೆ ಬರುತ್ತದೆ ಎಂದು ನಿರೀಕ್ಷಿಸುವುದು ಅಸಾಧ್ಯ ಎನ್ನುವುದು ಅವರ ಅನುಭವದ ಮಾತು. ಪರಿಸ್ಥಿತಿಯು ಬಿಗಡಾಯಿಸಿದಾಗ ಮುನ್ನುಗ್ಗಿ ಕೆಲಸ ಮಾಡುವ ಕೌಶಲ ರಾಧಿಕಾಗೆ ಒಲಿದಿದೆ. ದೇಶದ ವಿವಿಧ ರಾಜ್ಯಗಳಿಗೆ ಅವರು ಆಂಬುಲೆನ್ಸ್ ಚಲಾಯಿಸಿ, ಶವಗಳನ್ನು ಸಂಬಂಧಿಕರಿಗೆ ತಲುಪಿಸುವ ಕೆಲಸ ಮಾಡಿದ್ದಾರೆ.

‘ಈ ವೃತ್ತಿಯಲ್ಲಿ ಮನಸ್ಸು ಗಟ್ಟಿಯಿರಬೇಕು. ಕಿಚಾಯಿಸುವವರು, ಕೀಟಲೆ ಮಾಡುವವರು, ದುಡಿಮೆಗೆ ಕಲ್ಲು ಹಾಕುವವರನ್ನು ಎದುರಿಸಬೇಕು’ ಎಂದು ತಾವು ಸವೆಸಿದ ಕಷ್ಟದ ಹಾದಿಯನ್ನು ನೆನಪಿಸಿಕೊಳ್ಳುತ್ತಾರೆ.

ರಾಧಿಕಾ ಅವರ ಶ್ರಮ ಸಾರ್ಥಕವಾಗಿದೆ. ಪತಿ ಓಡಿಸುತ್ತಿದ್ದ ಕಾವೇರಿ ಆಂಬುಲೆನ್ಸ್ ಅವರ ಕೈ ಹಿಡಿದಿದೆ. ‘ಕಾವೇರಿ ಆಂಬುಲೆನ್ಸ್ ಸರ್ವಿಸಸ್’ ಎಂಬ ಬೋರ್ಡಿನಡಿ ಸಾಲಾಗಿ ನಿಂತ ಆಂಬುಲೆನ್ಸ್‌ಗಳು ರಾಧಿಕಾ ಅವರ ಸಾಹಸಗಾಥೆಯನ್ನು ಒಟ್ಟಾಗಿ ಹೇಳುತ್ತಿರುವಂತೆ ಭಾಸವಾಗುತ್ತದೆ. ಇತರರಿಗೆ ಕೆಲಸ ಕೊಟ್ಟ ಅವರ ಕಣ್ಣುಗಳಲ್ಲಿನ ಸಂತೃಪ್ತಿಗೆ ಬೆಲೆ ಕಟ್ಟಲಾಗದು, ಅಕ್ಷರಗಳಲ್ಲಿ ವಿವರಿಸಲೂ ಆಗದು.

ಎಲ್ಲವನ್ನೂ ಮರಳಿ ಹದಕ್ಕೆ ತಂದು ನಿಲ್ಲಿಸಿದೆ ಎಂದು ನಿಟ್ಟುಸಿರು ಬಿಡುವಷ್ಟರಲ್ಲಿ ಕೋವಿಡ್ ಎಂಬ ಮಹಾಮಾರಿ ಬಂದು ಅಪ್ಪಳಿಸಿತು. ಆಗೆಲ್ಲ ಆಂಬುಲೆನ್ಸ್‌ಗಳ ಅಗತ್ಯ ಇದ್ದರೂ, ಚಾಲಕರು ಕೆಲಸಕ್ಕೆ ಬರಲು ಹಿಂದೇಟು ಹಾಕಿದರು. ಲಾಕ್‌ಡೌನ್ ದೆಸೆಯಿಂದಾಗಿ ಎರಡು ಬಸ್ಸುಗಳು ತಿಂಗಳುಗಟ್ಟಲೆ ಖಾಲಿ ನಿಂತು, ಸಾಲದ ಹೊರೆ ಹೆಚ್ಚುತ್ತಾ ಹೋಯಿತು. ಮತ್ತೊಂದು ಆಂಬುಲೆನ್ಸ್ ಅಪಘಾತಕ್ಕೀಡಾಗಿ ಪೂರ್ತಿ ನಷ್ಟವಾಗಿದ್ದರಿಂದ ಆರ್ಥಿಕವಾಗಿ ತುಸು ಹೊಡೆತ ಬಿತ್ತು. ‘ಹಾಗೆಂದು ನಾನು ಎದೆಗುಂದಿಲ್ಲ. ಈಗ ಎಂಟು ಆಂಬುಲೆನ್ಸ್‌ಗಳಷ್ಟೇ ಇವೆ. ಮಡಿಕೇರಿಯಲ್ಲಿ ಒಂದು ಕಾಫಿತೋಟವನ್ನು ಖರೀದಿಸಿದ್ದೆ. ಈಗ ಕೃಷಿಯತ್ತ ಹೆಚ್ಚು ಗಮನ ಹರಿಸುತ್ತಿದ್ದೇನೆ. ನಾನು ಸಾಗಿ ಬಂದ ದಾರಿಯನ್ನು ಗಮನಿಸಿದರೆ ನನಗೇ ವಿಸ್ಮಯವೆನಿಸುತ್ತದೆ’ ಎನ್ನುತ್ತಾರೆ ರಾಧಿಕಾ.

ಪ್ರತಿಕ್ರಿಯಿಸಿ: feedback@sudha.co.in





# ಗಂಗಮ್ಮನ ತಂದ ಗೌರಮ್ಮ

ಶಿರಸಿಯ ಗಣೇಶ ನಗರದ ಗೌರಿ ಮೂರು ಬಾವಿಗಳನ್ನು ಏಕಾಂಗಿಯಾಗಿ ತೋಡಿರುವ ಸಾಹಸಿ. ಆಕೆಯ ಸಾಹಸಗಾಥೆ ನಾಡಿನ ಕೃತಜ್ಞತೆಗೆ ಅರ್ಹವಾದುದು.

■ ರಾಜೇಂದ್ರ ಹೆಗಡೆ